| | |
|---|---|
| ಪ್ರಾಸಾ | 15 |
| ಚಾಸಾ | 15 |

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆಃ57)
ನಮೂನೆ ಸಂಖ್ಯೆ 4
(ಸಿವಿಲ್)

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**

**ವಿಶೇಷ ಸತ್ರ ಪ್ರಕರಣ ಸಂಖ್ಯೆಃ 123/2023**

(1 ನೇ ಆರೋಪಿಯನ್ನು ವಿ.ಸಿ ಮುಖಾಂತರ ವಿಚಾರಣೆಗೆ ಹಾಜರುಪಡಿಸಲಾಗಿದೆ)

**ದಿನಾಂಕಃ 01.10.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಲೋಹಿತಾಶ್ವ |
| ತಂದೆ ಹೆಸರು | ಃ | ಪರಮೇಶ್ವರಪ್ಪ |
| ವಯಸ್ಸು | ಃ | 28 ವರ್ಷ |
| ಉದ್ಯೋಗ | ಃ | ಬೇಕರಿ ಕೆಲಸ |
| ವಾಸಸ್ಥಳ | ಃ | ದಿಬ್ಬೂರಹಳ್ಳಿ |

**ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ-**

**1.** ನಾನು ದಿಬ್ಬೂರಹಳ್ಳಿಯಲ್ಲಿ, ನ್ಯೂ ಬೆಂಗಳೂರು ಬೇಕರಿ ಹೆಸರಿನಲ್ಲಿ ಬೇಕರಿ ಅಂಗಡಿ ಇಟ್ಟುಕೊಂಡಿರುತ್ತೇನೆ.

**2.** ಸುಮಾರು ಒಂದು ವರ್ಷಗಳ ಹಿಂದೆ ಬೆಃ 8.00 ಗಂಟೆ ಸಮಯದಲ್ಲಿ ಪೊಲೀಸರು ಇಬ್ಬರು ವ್ಯಕ್ತಿಗಳನ್ನು ನಮ್ಮ ಬೇಕರಿ ಬಳಿ ಕರೆದುಕೊಂಡು ಬಂದಿದ್ದರು. ಎರಡು

| | |
|---|---|
| ಪ್ರಾಸಾ | 15 |
| ಚಾಸಾ | 15 |

-ಮೂರು ದಿನಗಳ ಹಿಂದೆ, ಸದರಿ ಇಬ್ಬರು ವ್ಯಕ್ತಿಗಳು ಬಂದಿದ್ದಾರೆಯೇ ಎಂದು ಪೊಲೀಸರು ನನ್ನನ್ನು ವಿಚಾರಿಸಿದರು. ಸದರಿ ಇಬ್ಬರು ವ್ಯಕ್ತಿಗಳು ನಮ್ಮ ಅಂಗಡಿಗೆ ಬಂದ ಬಗ್ಗೆ ನನಗೆ ಗೊತ್ತಿರುವುದಿಲ್ಲವೆಂದು ನಾನು ಹೇಳಿರುತ್ತೇನೆ. ನಂತರ ಪೊಲೀಸರು ಸ್ಥಳದಲ್ಲಿ ಫೋಟೋ ತೆಗೆದುಕೊಂಡು ಸಹಿ ಪಡೆದುಕೊಂಡಿರುತ್ತಾರೆ. ಸದರಿ ಪೊಲೀಸರು ಕರೆದುಕೊಂಡು ಬಂದಿದ್ದ ಇಬ್ಬರು ವ್ಯಕ್ತಿಗಳನ್ನು ನನಗೆ ಗುರುತಿಸಲು ಆಗುವುದಿಲ್ಲ, ಕಾರಣ ಈಗ ಅವರ ಚಹರೆ ಬಗ್ಗೆ ನೆನಪಾಗುತ್ತಿಲ್ಲ. ನಾನು ನಮ್ಮ ಅಂಗಡಿಯ ಬಳಿ ಮಾಡಿದ್ದ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ.

ಸಾಕ್ಷಿಗೆ ಪಂಚನಾಮೆಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿ 22 ಎಂದು, ಸಾಕ್ಷಿಯ ಸಹಿಯನ್ನು ನಿಪಿ 22(ಎ) ಎಂದು ಗುರುತಿಸಲಾಯಿತು.

**3.** ಸದರಿ ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ನಾನು ತಿಳಿದುಕೊಂಡಿಲ್ಲ. ಬೇರೆ ವಿಚಾರ ನನಗೆ ತಿಳಿದಿಲ್ಲ. ಇಲ್ಲಿ ಹೇಳಿದ ವಿಚಾರಗಳನ್ನು ಬಿಟ್ಟು ಪೊಲೀಸರಿಗೆ ಬೇರೆ ಹೇಳಿಕೆ ನಾನು ನೀಡಿಲ್ಲ.

| | |
|---|---|
| ಪ್ರಾಸಾ | 15 |
| ಚಾಸಾ | 15 |

**(ಈ ಹಂತದಲ್ಲಿ ವಿಶೇಷ ಸಾರ್ವಜನಿಕ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

<u>ಪಾಟೀ ಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ-</u>

**4.** ದಿಃ 27.08.2023 ರಂದು ಪೊಲೀಸರು ನನ್ನ ಬೇಕರಿ ಬಳಿ ಬಂದಿದ್ದರು ಎಂದರೆ ಸಾಕ್ಷಿಯು ದಿನಾಂಕವನ್ನು ಖಚಿತವಾಗಿ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ವಿ.ಸಿ. ಮುಖಾಂತರ ಹಾಜರು ಪಡಿಸಿದ 1ನೇ ಆರೋಪಿಯನ್ನು ಹಾಗೂ ನ್ಯಾಯಾಲಯದ ಮುಂದಿರುವ 3ನೇ ಆರೋಪಿಯನ್ನು ಪೊಲೀಸರು ಆ ದಿನ ಕರೆದುಕೊಂಡು ಬಂದಿದ್ದರು ಎಂದರೆ ಸಾಕ್ಷಿಯು ವಿ.ಸಿ. ಮುಖಾಂತರ ಹಾಜರು ಪಡಿಸಿದ 1ನೇ ಆರೋಪಿಯನ್ನು ನೋಡಿ, ಹೌದು ಎಂದು ಹೇಳಿ, ನಂತರ ತನಗೆ ಸದರಿ ಇಬ್ಬರು ವ್ಯಕ್ತಿಗಳನ್ನು ಗುರುತಿಸಲು ಆಗುವುದಿಲ್ಲ ಎಂದು ಹೇಳುತ್ತಾರೆ. ಸದರಿ 1 ಮತ್ತು 3ನೇ ಆರೋಪಿತರು ಎರಡು-ಮೂರು ದಿನಗಳ ಹಿಂದೆ ನಾನು ಬೇಕರಿಯಲ್ಲಿದ್ದಾಗ ಬಂದು ವಾಟರ್ ಬಾಟಲ್ ಹಾಗೂ ಮಜಾ ಕೂಲ್ ಡ್ರಿಂಕ್ಸ್ ನ್ನು ಖರೀದಿ ಮಾಡಿ, ನಂತರ ಸದರಿ ಕೂಲ್ ಡ್ರಿಂಕ್ಸ್ ನ್ನು ಕುಡಿದು, ನೀರಿನಿಂದ ಕೈ ತೊಳೆದುಕೊಂಡು ಹೊರಟು ಹೋದರು ಎಂದರೆ ಸರಿಯಲ್ಲ. ಸದರಿ 1 ಮತ್ತು 3ನೇ ಆರೋಪಿತರನ್ನು ನಮ್ಮ ಅಂಗಡಿಯ ಬಳಿ ಕರೆದುಕೊಂಡು ಬಂದಿದ್ದಾಗ, ನಿಪಿ 22 ರಂತೆ ಪಂಚನಾಮೆ ಮಾಡಿ ನನ್ನ ಸಹಿ ಪಡೆದಿದ್ದರು ಎಂದರೆ ಸರಿಯಲ್ಲ.

| | |
|---|---|
| ಪ್ರಾಸಾ | 15 |
| ಚಾಸಾ | 15 |

ಸಾಕ್ಷಿಗೆ ಹೇಳಿಕೆಯ " ಈ ದಿನ ............................ ಗುರುತಿಸುತ್ತೇನೆ" ಎಂಬ ಭಾಗವನ್ನು ವಿಶೇಷ ಸರ್ಕಾರಿ ಅಭಿಯೋಜಕರು ಸಾಕ್ಷಿಗೆ ಓದಿ ಹೇಳಿದ್ದು, ಸಾಕ್ಷಿಯು ಸದರಿ ಹೇಳಿಕೆಯನ್ನು ಅಲ್ಲಗಳೆದಿರುವುದರಿಂದ ಸದರಿ ಭಾಗವನ್ನು ನಿಪಿ **23** ಎಂದು ಗುರುತಿಸಲಾಯಿತು.

**5.** 1 ಮತ್ತು 3 ನೇ ಆರೋಪಿತರು ನಮ್ಮ ಅಂಗಡಿಯ ಬಳಿ ಬಂದಿದ್ದರೂ ಹಾಗೂ ಪೊಲೀಸರು ಅವರನ್ನು ಕರೆದುಕೊಂಡು ಬಂದಾಗ, ಅವರನ್ನು ಗುರುತಿಸಿದ್ದರೂ ಸಹ ನಾನು ಸದರಿ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲು: 1 ರಿಂದ 4 ನೇ ಆರೋಪಿತರ ಪರ ಶ್ರೀಎಂ.ಜಿ.ಎಸ್.ಆರ್ ವಕೀಲರಿಂದ:</u>**

**6.** ನಾನು ಮೂಲತಃ ಹಾಸನ ಜಿಲ್ಲೆಯವನಾಗಿರುತ್ತೇನೆ. ನನ್ನ ಬೇಕರಿ ಅಂಗಡಿ ದಿಬ್ಬೂರು ಹಳ್ಳಿಯ ಸರ್ಕಲ್ ಹಾಗೂ ಬಸ್ ಸ್ಟೆಂಡ್ ಬಳಿ ಇರುತ್ತದೆ ಎಂದರೆ ಸರಿ. ಸದರಿ ಸ್ಥಳವು ಜನ ಸಂದಾಣಿಯಿರುವ ಪ್ರದೇಶ ಎಂದರೆ ಸರಿ. ಸದರಿ ಬೇಕರಿಯಲ್ಲಿ ಕೆಲವು ಸಮಯಗಳಲ್ಲಿ ನಾನು ಇರುತ್ತೇನೆ ಹಾಗೂ ಕೆಲವು

| | |
|---|---|
| ಪ್ರಾಸಾ | 15 |
| ಚಾಸಾ | 15 |

ಸಮಯಗಳಲ್ಲಿ ನನ್ನ ಅಣ್ಣ ಇರುತ್ತಾನೆ ಎಂದರೆ ಸರಿ. ಸದರಿ ಪೊಲೀಸರು ಹಾಗೂ ಇಬ್ಬರು ವ್ಯಕ್ತಿಗಳೊಂದಿಗೆ ಬೇರೆ ಯಾರು ಬಂದಿರಲಿಲ್ಲ ಎಂದರೆ ಸರಿ. ಖಚಿತವಾಗಿ ಸದರಿ ಪೊಲೀಸರೊಂದಿಗೆ ಯಾರು ಬಂದಿದ್ದರೆಂದು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ. ಪೊಲೀಸರು ಇಬ್ಬರು ವ್ಯಕ್ತಿಗಳನ್ನು ಕರೆದುಕೊಂಡು ನಮ್ಮ ಬೇಕರಿ ಅಂಗಡಿಯ ಬಳಿ ಬಂದಿಲ್ಲ ಎಂದರೆ ಸರಿಯಲ್ಲ. ನಿಪಿ 22 ರಲ್ಲಿನ ಸಹಿಯನ್ನು ನಾನು ಠಾಣೆಯಲ್ಲಿ ಇರುತ್ತೆನೆಂದರೆ ಸರಿಯಲ್ಲ.

**ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಕೆ ಎಂ ಎಂ ವಕೀಲರಿಂದಃ**

ಕುಮಾರಿ ಇ.ವಿ. ವಕೀಲರು ಶ್ರೀ ಕೆ.ಎಂ.ಎಂ ವಕೀಲರ ಪರ ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಪಾಟೀ ಸವಾಲುಃ 6 ನೇ ಆರೋಪಿ ಪರ ಶ್ರೀಹೆಚ್ ಸಿ ಪಿ ವಕೀಲರಿಂದಃ**

ಶ್ರೀ. ಹೆಚ್.ಸಿ.ಪಿ. ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರುವಿಚಾರಣೆಃ ಇಲ್ಲ.**

**(ದಿನಾಂಕಃ 01.10.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**(ಶಿವಪ್ರಸಾದ್.ಕೆ.ಬಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**